ಶ್ರೀ ಎಸ್. ನಿಜಲಿಂಗಪ್ಪ.—280 ಸಾವಿರ ಎಕರೆ ಗುಲ್ಬರ್ಗ ಜಿಲ್ಲೆಯಲ್ಲಿ ಮತ್ತು 270 ಸಾವಿರ ಎಕರೆ ಬಿಜಾಪುರ ಜಿಲ್ಲೆಯಲ್ಲಿ.

ಶ್ರೀ ಎಸ್. ಶಿವಪ್ಪ.—ಈ ಎರಡನ್ನೂ ಕಟ್ಟಿದ ಮೇಲೆ ಮೈಸೂರು ರಾಜ್ಯದಲ್ಲಿ ಎಷ್ಟು ಎಕರೆ ಮತ್ತು ಆಂಧ್ರ ರಾಜ್ಯದಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಇನ್ನೊಂದು ಪ್ರಶ್ನೆ ಕೇಳಿದರೆ ಅದನ್ನು ಹೇಳುತ್ತೇನೆ.

ಶ್ರೀ ಗಂಗಾಧರ ನಾಮೋಷಿ.—ನಾರಯಣಪುರದ ಕಟ್ಟೆಯ ಸೈಟನ್ನು ಬದಲಾವಣೆ ಮಾಡಿದ್ದರಿಂದ ಖರ್ಚಿನಲ್ಲಿ ಎಷ್ಟು ವ್ಯತ್ಯಾಸವಾಗಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಬದಲಾವಣೆಯಾಗಿದೆಯೆಂದು ನಾನು ಹೇಳಲಿಲ್ಲ, ಅವರು ಆ ರೀತಿ ಒಂದು ಸೂಚನೆಯನ್ನು ಕೊಟ್ಟರು, ಅಷ್ಟೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ರಾಜ್ಯದಲ್ಲಲ್ಲದೆ ಆಂಧ್ರ ರಾಜ್ಯದಲ್ಲಿ ಎಷ್ಟು ನೀರಾವರಿಯಾಗುತ್ತದೆಂದು ಅವರು ಕೇಳಿದರು.

ಶ್ರೀ ಎಸ್. ನಿಜಲಿಂಗಪ್ಪ.—ಅವರ ಪ್ರಶ್ನೆಯನ್ನು ನಾನು ತಿಳಿದುಕೊಂಡಿದ್ದೇನೆ, ಆಮೇಲೆ ಅದನ್ನು ಹೇಳುತ್ತೇನೆಂದು ಅವರಿಗೆ ಹೇಳಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರ ಪ್ರದೇಶದಲ್ಲಿ ಹೆಚ್ಚಾಗುತ್ತದೆಯೋ ನಮ್ಮ ರಾಜ್ಯದಲ್ಲ ಹೆಚ್ಚಾಗುತ್ತದೆಯೋ?

ಶ್ರೀ ಎಸ್. ನಿಜಲಿಂಗಪ್ಪ.—400 ಟಿ. ಎಂ. ಸಿ. ಎಫ್‌ಟಿ.–ಮಹಾರಾಷ್ಟ್ರಕ್ಕೆ, 800 ಆಂಧ್ರಕ್ಕೆ ಮತ್ತು 640 ಟಿ.ಎಂ.ಸಿ. ಎಫ್‌ಟಿ. ನಮಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ, ನೀರಾವರಿಗಾಗಿ; ಇನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಗೋದಾವರಿಯ ನೀರು ಆಂಧ್ರಕ್ಕೆ ಬರುತ್ತದೆ. ಈಗ ನಮಗೂ ಮಹಾರಾಷ್ಟ್ರಕ್ಕೂ ಹಂಚಿಕೆಯಾಗಬೇಕು; ಇದು ಎಷ್ಟು ನೀರು ಸಿಕ್ಕುತ್ತದೆ ಎನ್ನುವುದನ್ನವಲಂಬಿಸಿದೆ.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಮುಖ್ಯ ಮಂತ್ರಿಗಳೂ ಕೇಂದ್ರ ನೀರಾವರಿ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿದ್ದಿತು, ಆ ಸಮ್ಮೇಳನವನ್ನು ಯಾವಾಗ ಕರೆಯುವುದು?

ಶ್ರೀ ಎಸ್. ನಿಜಲಿಂಗಪ್ಪ.—ಈ ಹೊತ್ತು ಅದು ನಡೆಯಬೇಕಿತ್ತು, ಸಾಧ್ಯವಾಗಲಲ್ಲ, ಆಮೇಲೆ ನಡೆಯಬಹುದು.

ಶ್ರೀ ಎಸ್. ಆವಲರೆಡ್ಡಿ.—ನಮಗೆ ಇನ್ನೂ ಹೆಚ್ಚು ನೀರು ಸಿಕ್ಕುವ ಸಂಭವವಿದೆಯೋ ಅಥವಾ ಈಗ ಒದಗಿಸಿರುವದಕ್ಕಿಂತ ಜಾಸ್ತಿ ಸಿಕ್ಕುವ ಸಂಭವವಿಲ್ಲವೊ?

ಅಧ್ಯಕ್ಷರು.—ಅದು ಅವರು ಕೊಟ್ಟಿರುವ ಉತ್ತರದಲ್ಲಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಯೋಜನೆಗಳನ್ನು ಏಳೆಂಟು ವರ್ಷಗಳಲ್ಲಿ ಮುಗಿಸುತ್ತೇವೆಂದೂ, ಇದಕ್ಕೆ ಬೇಕಾಗುವ ಪೂರ್ತಿ ಹಣವನ್ನು ಕೇಂದ್ರ ಕೊಡಬೇಂದು ಮನವಿ ಮಾಡಿಕೊಂಡಿದ್ದೇವೆಂದೂ ಹೇಳಿದ್ದಾರೆ, ಅಲ್ಲಿ ನಮ್ಮ ಮಂತ್ರಿಗಳೇ ಇರುವುದರಿಂದ ಮೂರೇ ವರ್ಷಗಳಲ್ಲಿ ಪೂರೈಸುವುದಕ್ಕೆ ಸಾಧ್ಯವೆ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಮಂತ್ರಿಗಳು ಅಲ್ಲಲ್ಲ, ಅವರು ಕೇಂದ್ರ ಸರಕಾರದ ಮಂತ್ರಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳ ಉದ್ದೇಶ ಚೆನ್ನಾಗಿದೆ; ಆದರೆ ಅಲ್ಲಿ ಬರಿಯ ಕಟ್ಟೆಗಳನ್ನು ಕಟುತ್ತೀರೊ ಅಥವಾ ಕಾಲುವೆಗಳನ್ನೂ ಕಟ್ಟುತ್ತೀರೊ ಏಕೆಂದರೆ, ಒಂದು ಕಡೆ ಕಾಲುವೆ ತೆಗೆದಿದ್ದಾರೆ ಆದರೆ ಇನ್ನೂ ಕಟ್ಟೆಯನ್ನು ಕಟ್ಟಿಲ್ಲ.

ಅಧ್ಯಕ್ಷರು.—ಈಗ ಚರ್ಚೆ ಮತ್ತು ಟೀಕೆಗಳನ್ನು ಮಾಡಬಾರದು, ಪ್ರಶ್ನೆ ಕೇಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಣೆಕಟ್ಟು ಮತ್ತು ಕಾಲುವೆಗಳನ್ನು ಒಂದೇಸಾರಿ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಕಟ್ಟಿದ ನೀರು ನಿಲ್ಲಿಸಿದ ಮಾರನೆಯ ದಿವಸವೇ ಆ ನೀರನ್ನು ರೈತ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

New Hospitals opened in the State during the Third Five-Year Plan.

*Q.—384. Srl K. H. RANGANATH (Mudigere).—

Will the Government be pleased to state :—

(*a*) the number of new hospitals that were opened in the State during the Third-Five-Year Plan (including the Health Centres and Maternity Hospitals);

(*b*) whether the target of providing Hospitals under Second Five-Year Plan was reached in the State at the end of the plan and if so the total number of Hospitals that were opened during the Second Five-Year Plan ?

A.—Sri K. NAGAPPA ALVA (Minister for Health).—

(*a*) 86 Public Helath Centres.
33 Health Unit Type Dispensaries.
2 Cottage Hospitals.
1 Hospital attached to the Karnatak Medical College, Hubli.

122

(*b*) No.

2 Cottage Hospitals.
1 Hospital attached to the Karnatak Medical College.
149 Public Health Centres.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ಉತ್ತರ (ಎ) ನಲ್ಲಿ 86 ಪಬ್ಲಿಕ್ ಹೆಲ್ತ್ ಸೆಂಟರ್ಸ್ ಪ್ರಾರಂಭಿಸಲಾಗಿದೆ ಎಂದು ಹೇಳಿದೆ. ನಮ್ಮ ದೇಶದ ಯಾವ ಭಾಗದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ತೆರೆಯಲಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ನಮ್ಮಲ್ಲಿ ಆ ವಿವರ ಇಲ್ಲಿ ಇಲ್ಲ.

Sri K. H. RANGANATH.—What was the target fixed ?

Sri K. NAGAPPA ALVA.—The target was 178 institutions. Out of them, 152 have been completed.

ಶ್ರೀ ಕೆ. ಎಚ್. ರಂಗನಾಥ್.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 122 ಆಸ್ಪತ್ರೆಗಳಲ್ಲಿ ಎಷ್ಟು ಆಸ್ಪತ್ರೆಗಳನ್ನು ಪ್ರಾರಂಭ ಮಾಡಲಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಎರಡು ಕಾಟೇಜ್ ಆಸ್ಪತ್ರೆಗಳ ವಿಷಯದಲ್ಲಿ ವಿಶೇಷ ಕೆಲಸವಾಗಿದೆ. ಎಂಟು ಹೆಲ್ತ್ ಯೂನಿಟ್ ಟೈಪ್ ಡಿಸ್ಪೆನ್ಸರಿಗಳು ಆಗಿವೆ.

Sri K. H. RANGANATH.—Out of the 187 institutions, the work regarding 122 institutions has been done. Out of the 122, what was the number left over from the second plan ?

Mr. SPEAKER.—If supplementaries relate to statistics, I would suggest that the hon'ble Members should include them in the main Question itself instead of reserving them for supplementaries.

Sri K. NAGAPPA ALVA.—Out of 178, 152 institutions were started. Out of them, 2 cottage hospitals and 8 health unit type dispensaries were spill-overs from the 2nd plan.

Sri K. H. RANGANATH.—What is the target fixed under the third plan ?

Sri K. NAGAPPA ALVA.—116 primary health centre and 50 health units.

Sri GANJI VEERAPPA.—For the public health centres and health unit dispensaries, does the Government receive any aid from the Centre and if so what is the difference between the aid given to the public health centres and health unit dispensaries ?

Sri K. NAGAPPA ALVA:—Primary health centres are schemes by themselves for which we get two-thirds of the expenditure from the Centre. The rest we have to meet. "Regarding health unit dispensaries, 50 per cent of the recurring and non-recurring expenditure is met by Taluk Boards.

Sri J. P. SARWESH.—May I know the reasons for not sanctioning more health units to backward areas where medical facilities are poor ?

Sri K. NAGAPPA ALVA.—There is a programme and according to it we are taking into consideration the backwardness of areas in respect of medical facilities.

Sri B. P. KADAM.—In sanctioning public health centres, are the recommendations of the lower authorities respected ?

Sri K. NAGAPPA ALVA.—Yes, but we have to look into so many other factors also.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಆಸ್ಪತ್ರೆಗಳು fully equipped ಆಗಿವೆಯೇ ಆಗದೆ ಇದ್ದರೆ ಎಷ್ಟು ಆಸ್ಪತ್ರೆಗಳ ಹಾಗೆ ಆಗಿಲ್ಲ ! ಅಲ್ಲದೆ ಅದಕ್ಕಾಗಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಹೆಚ್ಚು ಕೆಲಸ ಮಾಡಬೇಕಾಗಿದೆ. ಎಲ್ಲಾ ಆಸ್ಪತ್ರೆ ಪೂರ್ತಿಯಾಗಿ ಎಕ್ವಿಪ್ಪ್ ಆಗಿಲ್ಲ ಎಂಬುದನ್ನು ಒಪ್ಪುತ್ತೇನೆ. ಇದಕ್ಕಾಗಿ ನೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ವ್ಯಾನ್ ಪ್ರೊವೈಡ್ ಮಾಡಬೇಕಾಗುತ್ತದೆ. ಡಾಕ್ಟರರ ಅಭಾವ ಕೂಡ ಇದೆ. ಎಲ್ಲಾ ಹೆಲ್ತ್ ಸೆಂಟರ್‌ಗಳಲ್ಲಿ ಡಾಕ್ಟರರು ಇಲ್ಲ. ವ್ಯಾನ್‌ಗಳನ್ನು ಪ್ರಯಾರಿಟಿ ಬೇಸಿನ್ ಮೇಲೆ ಕೊಡುತ್ತಾ ಇದ್ದೇವೆ. ಡಾಕ್ಟರ್ ನೇಮಕ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಈಗ 122 ಆಸ್ಪತ್ರೆಗಳು ಆಗಿವೆ. ಕೆಲವು ಆಸ್ಪತ್ರೆಗಳನ್ನು ಎರಡನೇ ಯೋಜನೆಯಿಂದ ಮೂರನೇ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ. ಈ ಬಾಬಿಗೆ ಒದಗಿಸಿದ ಹಣ ಖರ್ಚು ಮಾಡಲು ಸಾಧ್ಯವಾಯಿತೇ ? ಎಷ್ಟು ಹಣ ಖರ್ಚಾಗಿದೆ ? ಎಷ್ಟು ಹಣ ಖರ್ಚಾಗದೇ ಉಳಿದಿದೆ ? ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಗುರಿ ಮುಟ್ಟಲು ಸಾಧ್ಯವಾಗುವುದೇ ?

ಶ್ರೀ ಕೆ. ನಾಗಪ್ಪ ಆಳ್ವ.—ಗುರಿ ಮುಟ್ಟುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಪ್ರತಿ ವರ್ಷ ಹತ್ತು ಆಸ್ಪತ್ರೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ಇದರಲ್ಲಿ ಒಂದು ಕಷ್ಟ ಬಂದಿದೆ. ಈಗ ತುರ್ತು ಪರಿಸ್ಥಿತಿ ಇದೆ. ಇದರಿಂದ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ ಹಣ ಒದಗಿಸಲು ಸಾಧ್ಯವಿಲ್ಲ. ಆದ್ದರಿಂದ ಬಿಲ್ಡಿಂಗ್ ಮಟ್ಟಿಗೆ ಬಹಳ ತೊಂದರೆಯಾಗಿದೆ. ಇದನ್ನು ಸರಿಪಡಿಸಿ ಯೋಜನೆಯ ಗುರಿ ಮುಟ್ಟುವ ಆಶೆ ಇದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಎರಡನೇ ಯೋಜನೆಯ ಅವಧಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಹೆರಿಗೆ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ವಿಷಯ ಈಗ ನನ್ನ ಹತ್ತಿರವಿಲ್ಲ. ಪ್ರತ್ಯೇಕ ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಕುಟೀರ ಆಸ್ಪತ್ರೆ ಅಂದರೆ ಏನು ?

ಶ್ರೀ ಕೆ. ನಾಗಪ್ಪ ಆಳ್ವ.—ಕುಟೀರ ಆಸ್ಪತ್ರೆ ಎಂದು ಬೊಂಬಾಯಿ ಸರಕಾರದವರು ಹೆಸರು ಕೊಟ್ಟಿದ್ದಾರೆ. ಸಾಧಾರಣವಾಗಿ 60 ರಿಂದ 75 ಬೆಡ್ಸ್ ಉಳ್ಳಂಥ ಆಸ್ಪತ್ರೆಗಳನ್ನು ಪ್ರಾರಂಭ ಮಾಡುತ್ತಾರೆ.

9-00 A.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು 2 ಮತ್ತು 3ನೇ ಪಂಚವಾರ್ಷಿಕ ಯೋಜನೆಗಳಲ್ಲಿ ತೆರೆದಂಥ ಜನಾರೋಗ್ಯ ಕೇಂದ್ರಕ್ಕೆ ಡಾಕ್ಟರುಗಳ ಅಭಾವ ಇದೆಯೆಂದು ಅಪ್ಪಣೆ ಕೊಡಿಸಿದಿರಿ. ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರು ಮೆಡಿಕಲ್ ಕಾಲೇಜುಗಳಿಂದ ಹೊರಬಿದ್ದಂಥ ಮೆಡಿಕಲ್ ಗ್ರಾಜುಯೇಟುಗಳನ್ನು ಸರಕಾರದವರು ಬೇಡ ಎಂದು ಹೇಳಿದರೋ ಅಥವಾ ಅವರೇ ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿದರೋ ?

ಶ್ರೀ ಕೆ. ನಾಗಪ್ಪ ಆಳ್ವ.—ಬಂದವರನ್ನು ಸರಕಾರದವರು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ.

Sri S. M. KRISHNA.—The Minister said that apart from the recommendations of the local officials so many other things would be considered. I would like to know whether in that category, would the recommendations of the local Congress leaders also come ?

Sri K. NAGAPPA ALVA.—The question of Congress or non-Congress does not arise at all.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಪ್ರಾ.—ಡಾಕ್ಟರ್ ಅಭಾವವಿಧೆಯೆಂದು ಹೇಳಿದರು. ಬೇರೆ ಸ್ಟೇಟುಗಳಲ್ಲಿ ಜಾಸ್ತಿ ಸಂಬಳ ಸಿಕ್ಕುತ್ತದೆಂದು ಅಲ್ಲಿಗೆ ಹೊರಟು ಹೋಗುತ್ತಾರೆ. ಅವರ ಸಂಬಳವನ್ನು ಹೆಚ್ಚಿಸಿ ಇಲ್ಲಿಯೇ ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಅವರ ಸಂಬಳವನ್ನು ಹೆಚ್ಚಿಗೆ ಮಾಡುವ ವಿಷಯದಲ್ಲಿ ಸರಕಾರ ಆಲೋಚಿಸುತ್ತಾ ಇದೆ. ಬೇಗನೆ ಅವರ ಸಂಬಳವನ್ನು ನಾವು ಹೆಚ್ಚು ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರೆಕಮೆಂಡೇಷನ್ನೇ ಅಲ್ಲದೆ ಬೇರೆ ವಿಷಯಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿದರು. ಜನರಿಗೆ ಅನುಕೂಲವಾಗುವ ವಿಷಯವನ್ನು ಪರಿಶೀಲನೆ ಮಾಡುತ್ತಾರೋ ಅಥವಾ ಅವರಿಗೆ ಅನುಕೂಲವಾಗುವ ಕಡೆ ಹಾಸ್ಪಿಟಲ್‌ಗಳನ್ನು ಆರ್ಗನೈಸ್ ಮಾಡುತ್ತಾರೋ ?

ಶ್ರೀ ಕೆ. ನಾಗಪ್ಪ ಆಳ್ವ.—ಮಾನ್ಯ ಸದಸ್ಯರ ಅಭಿಪ್ರಾಯ ಹಾಗಿರಬಹುದು.

ಶ್ರೀ ಬಿ. ಎರ್. ಗೌಡ.—ಇಂಡಿಯಾ ಸರಕಾರದವರು ಆಸ್ಪತ್ರೆಗಳ ಸ್ಥಾಪನೆಗೋಸ್ಕರ ಹಣ ಕೊಟ್ಟಿದ್ದರೂ ಕಟ್ಟಡ ಪ್ರಾರಂಭವಾಗಿಲ್ಲ. ಅದನ್ನು ಕೂಡಲೆ ಈ ವರ್ಷದಲ್ಲಿಯೆ ಮುಗಿಸುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಹೌದು, ಮುಗಿಸುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಬಂದವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಒಬ್ಬೊಬ್ಬ ಮೆಡಿಕಲ್ ಗ್ರಾಜುಯೇಟಿಗೆ ಗ್ರಾಜುಯೇಷನ್ ಆಗುವಹೊತ್ತಿಗೆ ಸರಕಾರ 30 ಸಾವಿರ ರೂಪಾಯಿ ಖರ್ಚು ಮಾಡಿರುತ್ತದೆ. Is it not advisable to compel these graduates to work at least for two years in these hospitals, Sir ?

ಶ್ರೀ ಕೆ. ನಾಗಪ್ಪ ಆಳ್ವ.—30 ಸಾವಿರ ಖರ್ಚಾಗುವುದಿಲ್ಲ. ಸರಕಾರಕ್ಕೆ ಸಾಧಾರಣವಾಗಿ 10 ಸಾವಿರ ಖರ್ಚಾಗಬಹುದೆಂದು ಲೆಕ್ಕ ಮಾಡಿದೆ. ತಾವು ಹೇಳಿದ ಕಂಡಿಷನ್ ಹಾಕಿದ್ದೇವೆ.

ಶ್ರೀ ಇ. ನಾರಾಯಣ ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿನ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಪೋಸ್ಟ್ ಮಾಡಿದರೆ ಅವರು ಚಾರ್ಜು ತೆಗೆದುಕೊಳ್ಳುತ್ತಾ ಇಲ್ಲ, ಸಾಕಾದಷ್ಟು ಫೆಸಿಲಿಟಿಗಳು ಇಲ್ಲ ಎಂಬ ನೆಪದ ಮೇಲೆ. ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದೆ ಜನಕ್ಕೆ ತೊಂದರೆಯಾಗಿದೆ. ಆದ್ದರಿಂದ ಸರಕಾರದವರು ಕಡ್ಡಾಯವಾಗಿ ಪ್ರತಿಯೊಬ್ಬ ಡಾಕ್ಟರೂ ಗ್ರಾಮಾಂತರ ಪ್ರದೇಶಗಳಲ್ಲಿ ಐದು ವರ್ಷ ಸರ್ವ್ ಮಾಡಬೇಕು ಎಂಬ ವಿಧಿಯನ್ನು ಹಾಕಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಕಂಡಿಷನ್ ನಾವು ಈಗ ಇಂಪೋಸ್ ಮಾಡುತ್ತಾ ಇದ್ದೇವೆ.

ಶ್ರೀ ಎ. ಶರಣಪ್ಪ.—ಪಬ್ಲಿಕ್ ಹೆಲ್ತ್ ಸೆಂಟರುಗಳನ್ನು ಜನಸಂಖ್ಯೆ ಮತ್ತು ಏರಿಯ ದೃಷ್ಟಿಯಲ್ಲಿಟ್ಟುಕೊಂಡು ಸ್ಥಾಪನೆ ಮಾಡಿದ್ದೀರೋ ಅಥವ ಬೇಡಿಕೆ ಬಂದ ಕಡೆಗಳಲ್ಲಿ ಸ್ಥಾಪಿಸಲಾಗಿದೆಯೊ ? ಸ್ವಲ್ಪ ವಿವರ ಕೊಡುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಬೇಡಿಕೆ ಬಂದದ್ದನ್ನು ಗಮನದಲ್ಲಿಟ್ಟುಕೊಂಡು ಆಮೇಲೆ ಆಸ್ಪತ್ರೆಗಳನ್ನು ಸ್ಥಾಪನೆ ಮಾಡಬೇಕಾದರೆ, ಸಾಧಾರಣವಾಗಿ ಇಪ್ಪತ್ತೈದು ಜನಸಂಖ್ಯೆ ಏರಿಯಾಗೆ ಒಂದು ಯೂನಿಟ್ ಎಂದು ಮಾಡಿಕೊಂಡು, ಮಾಡುತ್ತಾ ಇದ್ದೇವೆ. ಆದರೆ ಒಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ : ಮಲೆನಾಡು ಏರಿಯ ಅಥವಾ ಬೇರೆ ಸ್ಥಳಗಳಲ್ಲಿ ಅಗತ್ಯ ಕಂಡುಬಂದಲ್ಲಿ ಈಗ 15 ಸಾವಿರ ಜನಸಂಖ್ಯೆಗೆ ಯೂನಿಟ್ ಮಾಡತಕ್ಕದ್ದನ್ನು, 7–8 ಸಾವಿರ ಜನಸಂಖ್ಯೆ ಇದ್ದಲ್ಲಿ ಕೊಡಬಹುದು ಎಂದು ತೀರ್ಮಾನಿಸಲಾಗಿದೆ.

ಶ್ರೀ ಎಸ್. ಶಿವಪ್ಪ.—ನಮ್ಮ ದೇಶದಲ್ಲಿ ಡಾಕ್ಟರುಗಳು ಕೆಲವುಕಡೆ ಕೇಂದ್ರೀಕೃತವಾಗಿ, ಇನ್ನು ಕೆಲವುಕಡೆ ಅವರ ಅಭಾವ ಜಾಸ್ತಿಯಾಗಿರುತ್ತದೆ. ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ಜಿಲ್ಲೆ ಸರ್ವಿನಷ್ಟನ್ನು ರಾಷ್ಟ್ರೀಕರಣ ಮಾಡುತ್ತೀರ ? ಆ ಮುಖಾಂತರ ಡಾಕ್ಟರ ಅಭಾವವನ್ನು ನಿವಾರಿಸಿ, ಡಾಕ್ಟರುಗಳನ್ನು ಸಮನಾಗಿ ಹಂಚುವುದಕ್ಕೆ ಪ್ರಯತ್ನ ಮಾಡುತ್ತೀರ ? ಆ ಬಗ್ಗೆ ಯೋಚನೆ ಮಾಡುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಸೂಚನೆ ಬಹಳ ಮಹತ್ವದ್ದು. ಆದರೆ ನದ್ಯದ ಪರಿಸ್ಥಿತಿಯನ್ನೂ ನೋಡಿ ಸೂಚನೆ ಮಾಡಿದ ಹಾಗಿಲ್ಲ. ಏಕೆಂದರೆ ಹಲವಾರು ವರ್ಷಗಳ ಅನುಭವದಿಂದ ಇಂಗ್ಲೆಂಡಿನಲ್ಲಿ ಅದನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ಬೇಕಾದ್ದಕ್ಕಿಂತಲೂ ಹೆಚ್ಚಿಗೆ ಹೈಕ್ವಾಲಿಟಿ ಪ್ರಾಕ್ಟೀಷಿ

(ಶ್ರೀ ಕೆ. ನಾಗಪ್ಪ ಆಳ್ವ)

ನರುಗಳು ಆಗಿ, ಬೇಕಾದಷ್ಟು ಡಾಕ್ಟರುಗಳು ಸಿಕ್ಕುತ್ತಾರೆ. ಇಲ್ಲ ನಮಗೆ ಬೇಕಾದಷ್ಟು ಡಾಕ್ಟರು ಇಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸದ್ಯಕ್ಕೆ ನ್ಯಾಷನಲೈಸ್ ಮಾಡಲಕ್ಕೆ ಸಾಧ್ಯವೇ ಇಲ್ಲ.

ಶ್ರೀ ಬಿ. ರಾಚಯ್ಯ.—ಪ್ರಶ್ನೆ 413ನೆಯ ವಿಚಾರಕ್ಕೆ ಹೈ ಕೋರ್ಟಿನಲ್ಲಿ ನಂಬಂಧಪಟ್ಟ ಹಾಗೆ ಒಂದು ರಿಟ್ ಪೆಂಡಿಂಗ್ ಇದೆ. ಅದನ್ನು ನಭೆಯ ಗಮನಕ್ಕೆ ತಂದಿದ್ದೇನೆ.

ಶ್ರೀ ಬಿ. ಎಲ್. ಗೌಡ.—ಯಾರೂ ಮೆರಿಟ್ಸ್ ಮೇಲೆ ಮಾತನಾಡುವುದಿಲ್ಲ, ಅದಕ್ಕೋಸ್ಕರ ಸಬ್ ಜುಡಿಸ್ ಆಗುವುದಿಲ್ಲ ಎಂದು ಹೇಳುತ್ತೇನೆ.

Mr. SPEAKER.—I will hold it over. I do not know the contents of the petition.

ಶ್ರೀ ಎಸ್. ಗೋಪಾಲ ಗೌಡ.—ಅಡ್ಮಿಟ್ ಆದಮೇಲೆ ರಿಟ್ ಹೋದರೋ ಅಥವ ಮುಂಚೆಯೊ ?

Mr. SPEAKER.—I have held it over. If I go on acertaining all that, there will be no time for taking up the other question.

ಶ್ರೀ ಜಿ. ಭೀಮಣ್ಣ.—ಪ್ರಶ್ನೆ 415. ಇದನ್ನು ಸೋಮವಾರ ತೆಗೆದುಕೊಳ್ಳುವುದಕ್ಕೆ ಪರವಾನಗಿ ಕೊಡಬೇಕು.

Mr. SPEAKER.—Yes; the question is held over.

Constitution of an Evaluation Committee.

*Q. 428. **Sri S. SIVAPPA** (Sravanabelagola).—

Will the Government be pleased to state :—

(*a*) whether they have constituted any Evaluation Committee to evaluate the progress achieved in various projects during the plan period in the State ;

(*b*) if so, when it was constituted ?

A.—**Sri S. NIJALINGAPPA** (Chief Minister).—

(*a*) No.

(*b*) Does not arise.

Sri S. SIVAPPA.—May I know the machinery through which the progress achieved in the various projects under the Plan has been evaluated and what is the result ?

Sri S. NIJALINGAPPA.—The Chief Minister calls for a conference very often and ascertains as to what has been done. We have found that this is not sufficient and a committee is proposed in this connection and we are going to set it up very soon and sufficient amount is also set apart for this purpose.

ಶ್ರೀ ಎಸ್. ಗೋಪಾಲ ಗೌಡ.—ಈ ಯೋಜನೆಯ ಪ್ರಗತಿಯನ್ನು ಸಮೀಕ್ಷೆ ಮಾಡುವುದಕ್ಕೆ ಸಮಿತಿಯನ್ನು ರಚಿನುವುದರ ಜೊತೆಗೆ, ಈಗ ಮುಖ್ಯವಾದ ದೊಡ್ಡ ದೊಡ್ಡ ಕಾಮಗಾರಿಗಳು ಹಾಗೂ ಲೋಕೋಪಯೋಗಿ ಶಾಖೆಯಲ್ಲಿ ನಡೆದಿರತಕ್ಕಂಥ ಅನೇಕ ಕೆಲಸಗಳಲ್ಲಿ, ಹಣ ಖರ್ಚಾಗಿದ್ದರೂ ಸೇತುವೆಗಳು ಆಗಿರುವುದಿಲ್ಲ, ಮೋರಿಗಳು ಆಗಿರುವುದಿಲ್ಲ, ಕಟ್ಟಡಗಳು ಬದ್ದು ಹೋಗಿರುತ್ತವೆ. ಇಂಥವನ್ನು ವಿಚಾರಣೆಗೆ ಗುರಿ ಮಾಡುವುದಕ್ಕೆ, ಅದಕ್ಕೆ ಯಾರು ಹೊಣೆ, ಯಾರು ಭಾಧ್ಯರು, ಎಷ್ಟು ಹಣ ಯಾರ ಕಾಲದಲ್ಲಿ ನಷ್ಟವಾಯಿತು ಎಂದು ಕಂಡುಹಿಡಿಯುವುದಕ್ಕೆ ಒಂದು ತಜ್ಞರ ವಿಚಾರಣ ಸಮಿತಿಯನ್ನು ಸರಕಾರದವರು ನೇಮಕ ಮಾಡುವ ವಿಷಯವನ್ನು ಪರಿಶೀಲನೆ ಮಾಡುತ್ತಾರೆಯೆ ?